ಶ್ರೀ ಎಸ್.ಎಂ. ಶೀರಾಳಿ ಚಂದ್ರಶೇಖರಿರ್.—ಈಗ ನನ್ನ ಪ್ರಶ್ನೆ ಏಜಿತವಾಗಿದೆ. ರಾಜ್ಯದಲ್ಲಿ ವಿದ್ಯುತ್ ಪೋತಾವನ್ನು ವಿಧಿಸಲಾಗಿದೆ ಕಾಳಿನದಿ ಪ್ರಾಜೆಕ್ಟ್ ಇನ್ನೂ ಮುಗಿದಿಲ್ಲ. ಆದ್ದರಿಂದ ಬೇರೆ ಪ್ರಯತ್ನ ಮಾಡಿ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ?

SRI K.H. SRINIVAS.—Sir, that aspect does not figure in the body of the question. I cannot answer it without proper notice.

ಶ್ರೀ ಎಸ್.ಎಂ. ಶೀರಾಳಿ ಚಂದ್ರಶೇಖರಿರ್.—ಈಗ ಈ ರಾಜ್ಯದಲ್ಲಿ ಲೇಕಡ ಎಷ್ಟು ವಿದ್ಯುಚ್ಛಕ್ತಿ ಕೊರತೆ ಇದೆ?

ಶ್ರೀ ಕೆ.ಎಚ್. ಶ್ರೀನಿವಾಸ್.—ಏನಿದೆ, ಎಷ್ಟಿದೆ ಎನ್ನತಕ್ಕಂಥಾದ್ದರ ಬಗ್ಗೆ ವಿವರವನ್ನು ಕೊಡಲಾಗಿದೆ.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರಿರ್.—ಈಗ ಇರತಕ್ಕಂಥ ವಿದ್ಯುಚ್ಛಕ್ತಿ ಪೋತಾವನ್ನು ಪುನಃ ಮುಂದುವರಿಸುವ ಸಾಧ್ಯತೆ ಇದೆಯೇ?

ಶ್ರೀ ಕೆ.ಎಚ್. ಶ್ರೀನಿವಾಸ್.—ರಾಜ್ಯ ಸರ್ಕಾರದ ಉದ್ದೇಶವಾದರೂ ನಮ್ಮಲ್ಲಿ ಉತ್ಪಾದನೆ ಮಾಡತಕ್ಕಂಥ ವಿದ್ಯುಚ್ಛಕ್ತಿ ಪ್ರಮಾಣ, ಮತ್ತ ಬೇರೆ ಕಡೆಯಿಂದ ಎಷ್ಟು ವಿದ್ಯುಚ್ಛಕ್ತಿಯನ್ನು ತರುವುದಕ್ಕೆ ಸಾಧ್ಯ ಇಷ್ಟೆಲ್ಲವನ್ನೂ ಯೋಚನೆ ಮಾಡುತ್ತಿದೆ. ರಾಜ್ಯದಲ್ಲಿರುವ ಕೈಗಾರಿಕಾ ಪಾಗೂ ಸಾಮಾನ್ಯ ಬಳಕೆ ದಾರರಿಗೆ ತೊಂದರೆಯಾಗಬಾರದೆಂಬುದೆ. ರಾಜ್ಯ ಸರ್ಕಾರದ ಉದ್ದೇಶ. ಈಗ ಎಷ್ಟು ವಿದ್ಯುಚ್ಛಕ್ತಿ ಪೋತಾ ಇದೆ ಎಂಬುದಾಗಿ ಹೇಳಿದ್ದೇವೆ. ಆದರೆ ಅನಿವಾರ್ಯ ಕಾರಣಗಳಿಂದಾಗಿ ವಿದ್ಯುಚ್ಛಕ್ತಿಯ ಉತ್ಪಾದನೆಯೇ ಕಡಿಮೆಯಾದರೆ, ಆಥವಾ ಇನ್ನಾವುದೇ ತೊಂದರೆ ಉಂಟಾದ ಪಕ್ಷದಲ್ಲಿ ವಿಚ್ಛುಚ್ಛಕ್ತಿಯನ್ನು ಪೋತಾ ಮಾಡಬೇಕಾಗುತ್ತದೆ. ಹೆಚ್ಚು ಕಡಿಮೆ ಇದು ಆಗಿದಾಗ್ಗೆ ಆಗುತ್ತಿದೆ. ಇರತಕ್ಕಂಥ ವಿದ್ಯುಚ್ಛಕ್ತಿ ಪೋತಾವನ್ನು ಒಂದು ತಿಂಗಳು ೨ ತಿಂಗಳು ಎಂಬುದಾಗಿ ಮುಂದುವರಿಸಿಕೊಂಡು ಪೋದರೆ ಬಳಕೆದಾರರಿಗೆ ತೊಂದರೆಯಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಂಡು ೩-೪ ತಿಂಗಳು ಎಂಬ ಒಂದು ಕಲ್ಪನೆಯನ್ನು ಇಟ್ಟುಕೊಂಡು ಆ ರೀತಿ ಹೇಳಿದ್ದೇವೆ. ಸಂದರ್ಭದಕ್ಕನುಸಾರವಾಗಿ ಜಾರಿಗೆ ಕೊಡುತ್ತೇವೆ

Providing new X-Ray Plant or immediate repair to X-Ray Plant to J.C. Hospital, Arasikere.

24 SRI D.B. GANGADHARAPPA (Arasikere)—Will the Minister for Health and Family Welfare be pleased to state.—

(a) whether is a fact that X-Ray Plant at J.C. Hospital, Arasikere is not working since the last two years,

(b) if so, the reasons why Government has not taken any action to rectify the X-Ray Plant,

(c) whether the X-Ray Plant is irrepairable, if so, whether the Government intend to replace it by a new X-Ray Plant?

SRI M. MALLAPPA (Minister for Health and Family Welfare).—

(a) Yes. Since 13-2-1978.

(b) Action has already been taken to rectify X-Ray Plant and it is In working condition now.

(c) X-Ray Plant has been repaired. The question of replacement does not arise.

ಶ್ರೀ ಡಿ.ಬಿ. ಗಂಗಾಧರಪ್ಪ —ತಾವು ಉತ್ತರದಲ್ಲಿ ಹೇಳಿದ್ದೀರಿ, ಹಾಲಿ ಇರತಕ್ಕ ಎಕ್ಸರೇ ಪ್ಲಾಂಟನ್ನು ರಿಪೇರಿ ಮಾಡಿಸಿದ್ದೇವೆ ಎಂದು ಆದರೆ ಆ ಯಂತ್ರವನ್ನು ಯಾರೋ ಖಾಸಗಿಯವರು ಡೊನೇಟ್ ಮಾಡಿರುವುದು ಮತ್ತು ಅದು ಬಹಳ ಚಿಕ್ಕದು ಹಾಗೂ ಕಳಿದ ಒಂಬತ್ತು ತಿಂಗಳುಗಳಿಂದ ದು ಕೆಟ್ಟುಹೋಗಿರುತ್ತದೆ. ಆದ್ದರಿಂದ ದಯವಿಟ್ಟು ಅದನ್ನು ರೀಪ್ಲೇಸ್ ಮಾಡಿ ಬೇರೆ ಎಕ್ಸ್‌ರೇ ಪ್ಲಾಂಟನ್ನು ಕೊಡುತ್ತೀರಾ?

†ಶ್ರೀ ಎಂ. ಮಲ್ಲಪ್ಪ —ಅದನ್ನು ಯಾರಾದರೂ ಡೊನೇಟ್ ಮಾಡಿರಲಿ, ಒಟ್ಟಿನಲ್ಲಿ ಅದು ಚಿಕ್ಕ ದಾದರೂ ಚೆನ್ನಾಗಿದೆ. ಬೇರೆ ಯಂತ್ರದ ಅಗತ್ಯ ಇದೆ ಎಂದರೆ ಅದನ್ನು ಆಲೋಚನೆ ಮಾಡಬೇಕಾಗಿರುತ್ತದೆ.

ಶ್ರೀ ಡಿ.ಬಿ. ಗಂಗಾಧರಪ್ಪ.—ಹಾಲಿ ಇರತಕ್ಕ ಎಕ್ಸ್‌ರೇ ಪ್ಲಾಂಟ್ ಬಹಳ ಚಿಕ್ಕದು ಎಂದು ಗೊತ್ತಿದ್ದರೂ ಕೂಡ ತಾವು ಈ ರೀತಿ ಉತ್ತರಿಸುತ್ತಿರುವುದು ಸರಿಯಲ್ಲ ಅನ್ನಿಸುತ್ತದೆ.

ಶ್ರೀ ಎಂ. ಮಲ್ಲಪ್ಪ.—ಚಿಕ್ಕದಾದರೂ ಚೆನ್ನಾಗಿ ಕೆಲಸ ಮಾಡುತ್ತದೆ. ಕೆಡದೆ ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ಆಯಿತು ಚಿಕ್ಕದಾದರೇನೂ ದೊಡ್ಡದಾದರೇನು?

ಶ್ರೀ ಡಿ.ಬಿ. ಗಂಗಾಧರಪ್ಪ.— ಕಳೆದ ೯ ತಿಂಗಳಿಂದ ಕೆಟ್ಟು ಹೋಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದ್ದು ಇತ್ತೀಚೆಗೆ ಅದನ್ನು ರಿಪೇರಿ ಮಾಡಿಸಲಾಗಿದೆ. ದಯವಿಟ್ಟು ಬೇರೆ ಒಂದು ಎಕ್ಸರೇ ಪ್ಲಾಂಟನ್ನು ಒದಗಿಸಿ ಕೊಡುತ್ತೀರಾ?

ಶ್ರೀ ಎಂ. ಮಲ್ಲಪ್ಪ.— ನಡೆಯುವವರು ಎಡುವುತ್ತಾರೆ. ಹಾಗೆಯೇ ಯಂತ್ರಗಳು ಕೆಟ್ಟು ಹೋಗುತ್ತವೆ. ಕೆಟ್ಟು ಹೋದವುಗಳನ್ನು ಆದಷ್ಟು ಬೇಗ ರಿಪೇರಿ ಮಾಡಿಸಿಕೊಡಲಾಗುತ್ತಿದೆ. ದೊಡ್ಡ ಎಕ್ಸ್‌ರೇ ಪ್ಲಾಂಟ್ ಏನಾದರೂ ಬೇಕಾದರೆ ವಿಚಾರ ಮಾಡೋಣ.

ಶ್ರೀ ಕೆ.ಎಚ್. ಹನುಮೇಗೌಡ.— ಆರಸೀಕೆರೆಯ ಎಕ್ಸರೇ ಪ್ಲಾಂಟ್ ಒಂದೇ ಅಲ್ಲ; ಸಾಮಾನ್ಯವಾಗಿ ಎಲ್ಲ ಕಡೆಯೂ ಕೆಟ್ಟುಹೋಗಿರುತ್ತವೆ. ಹಾಗಾದರೆ ಕೆಟ್ಟುಹೋದ ಎಷ್ಟು ದಿವಸದಲ್ಲಿ ರಿಪೇರಿ ಮಾಡಿಸುವ ವ್ಯವಸ್ಥೆ ಮಾಡುತ್ತೀರಿ? ರೋಗಿಗಳ ಅನುಕೂಲಕ್ಕಾಗಿ ಇರತಕ್ಕ ಯಂತ್ರಗಳು ವರ್ಷಾನುಗಟ್ಟಲೆ ಕೆಟ್ಟುನಿಂತರೆ ಹೇಗೆ? ಅದನ್ನು ರಿಪೇರಿ ಮಾಡಲು ಯಾರೋ ಬರಬೇಕು, ನೋಡಬೇಕು ಎಂದು ಕಾನೂನು ಕಟ್ಟಲೆ ಮಾಡುತ್ತಾ ಕುಳಿತರೆ ರೋಗಿಗಳ ಕ್ಷೇಮಾಭಿವೃದ್ಧಿಯನ್ನು ಏನು ಮಾಡಿದಂತಾಯಿತು? ಆದ್ದರಿಂದ, ರಿಪೇರಿ ವ್ಯವಸ್ಥೆಯನ್ನು ಎಷ್ಟು ದಿವಸದೊಳಗೆ ಮಾಡಿಸಿಕೊಡುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.— ಈ ಇಲಾಖೆಯಲ್ಲಿ ಒಬ್ಬರು ಎಂಜಿನಿಯರ್ ಇದ್ದಾರೆ. ಅವರು ಸಣ್ಣ ಪುಟ್ಟ ರಿಪೇರಿಗಳಿದ್ದರೆ ಕೂಡಲೇ ಮಾಡುತ್ತಾರೆ. ಮೇಜರ್ ರಿಪೇರ್ಸ್ ಆಗ ಬೇಕೆಂದರೆ ಅಥವಾ ಪಾರ್ಟ್ಸ್ ಹೋಯಿತೆಂದರೆ ಸ್ವಲ್ಪ ನಿಧಾನವಾಗುತ್ತದೆ, ಕಂಪನಿಯಿಂದ ಪಾರ್ಟ್ಸ್ ತರಿಸಬೇಕಾಗುತ್ತದೆ. ಸಾಮಾನ್ಯವಾಗಿ ಕೆಟ್ಟ ಎಕ್ಸರೇಗಳನ್ನು ಬಹು ಬೇಗ ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಸುಮಾರು ೯೦ ಪರ್ಸೆಂಟ್ ಎಕ್ಸ್‌ರೇಗಳು ಉಪಯೋಗಕ್ಕೆ ಬರುತ್ತಿರಲಿಲ್ಲ. ಈಗ ಆವೆಲ್ಲವನ್ನು ಉಪಯೋಗಕ್ಕೆ ಇಟ್ಟಿದ್ದೇವೆ ಈಗ್ಗೆ ೪-೫ ವರ್ಷಗಳಿಂದ ಕೆಟ್ಟಿವೆ ಎಂದರೆ ಅವುಗಳಿಗೆ ಇಂಪೋರ್ಟೆಡ್ ಮೆಷಿನ್ ಪಾರ್ಟ್ಸ್ ಸಿಗುತ್ತಿಲ್ಲ; ಹೊರಗಡೆಯಿಂದ ತರಿಸಬೇಕಾಗಿದೆ. ಆ ರೀತಿ ಪಾರ್ಟ್ಸ್ ಸಿಗದೆ ತೊಂದರೆಯಾಗಿದೆಯೇ ಹೊರತು ರಿಪೇರಿ ವ್ಯವಸ್ಥೆಯಿಂದ ಏನೂ ತೊಂದರೆಯಾಗಿಲ್ಲ; ಆದಷ್ಟು ಬೇಗ ರಿಪೇರಿ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಬಿ.ಇ. ರಾಮಯ್ಯ.— ಚಿಕ್ಕಮಗಳೂರಿನ ಜಿಲ್ಲಾ ಕೇಂದ್ರ ಆಸ್ಪತ್ರೆಯಲ್ಲಿ ಎಕ್ಸ್‌ರೇ ಪಾಳಾಗಿ ಎರಡು ತಿಂಗಳಾದರೂ ಈವರೆಗಾಯ್ತು ರಿಪೇರಿಯಾಗಿಲ್ಲ. ಅಲ್ಲಿಗೆ ಬರತಕ್ಕ ರೋಗಿಗಳ ಸಂಖ್ಯೆ ಬಹಳ ಇರುವುದರಿಂದ ಅದನ್ನು ಅತ್ಯಂತ ಶೀಘ್ರಗತಿಯಲ್ಲಿ ರಿಪೇರಿ ಮಾಡುವ ವ್ಯವಸ್ಥೆ ನಡೆದಿದೆಯೆ?

ಶ್ರೀ ಎಂ. ಮಲ್ಲಪ್ಪ.— ಇರತಕ್ಕ ಎಕ್ಸ್‌ರೇ ಪ್ಲಾಂಟನ್ನು ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ ಮತ್ತು ಆಲ್ಲಿಗೆ ಒಂದು ಹೊಸ ಎಕ್ಸ್‌ರೇ ಕೂಡ ಮಂಜೂರಾಗಿದೆ.

---

†Asterisks indicate that remarks or Speeches have not been revised by the member concerned.

ಶ್ರೀ ರಮೇಶ್ ಕುಮಾರ್.– ಮಾನ್ಯ ಸದಸ್ಯರಾದ ಹನುಮೇಗೌಡರು ಕೇಳಿದ ಪ್ರಶ್ನೆಗೆ ಬಹು ಬೇಗ ಕ್ರಮ ತೆಗೆದುಕೊಳ್ಳುತ್ತೇವೆಂದು ಉತ್ತರಿಸಿದ್ದೀರಿ. ಬಹು ಬೇಗ ಎನ್ನುವುದಕ್ಕೆ ಒಂದು ತಿಂಗಳೊಳಗೋ ೨ ತಿಂಗಳೊಳಗೋ ಎಂದು ಏನಾದರೂ ಕಾಲಮಿತಿ ಇದೆಯೇ? ಏಕೆಂದರೆ ಕೋಲಾರದ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ವರ್ಷದಿಂದ ಎಕ್ಸ್‌ರೇ ಕೆಲಸ ಮಾಡುತ್ತಿಲ್ಲ, ಬಹುಬೇಗ ಎಂಬುದಕ್ಕೆ ಅರ್ಥ ತಿಳಿಸಿದರೆ ರಾಜೀಯಾಗುತ್ತೇನೆ.

ಶ್ರೀ ಎಂ. ಮಲ್ಲಪ್ಪ.– ಕೋಲಾರದ್ದು ರಿಪೇರಿಯಾಗಿದೆ. ಇಂಥ ಕಡೆ ಇದೆ ಎಂದು ನಿರ್ದಿಷ್ಟವಾಗಿ ಹೇಳಿದರೆ ಹೇಳುತ್ತೇನೆ.

ಶ್ರೀ ಚೌಡಾರೆಡ್ಡಿ.– ನಾನು ಸ್ಯಾನಿಟೋರಿಯಂಗೆ ರೋಗಿಗಳನ್ನು ಕರೆದುಕೊಂಡು ಹೋದಾಗಲೂ ಕೂಡ, ಎಕ್ಸ್‌ರೇ ಪ್ಲಾಂಟ್‌ಗೋಸ್ಕರ ಬರೆದು ೩–೪ ವರ್ಷಗಳಾದರೂ ಬಂದೇ ಇಲ್ಲ, ಸೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋದರೆ ಅಲ್ಲೇ ನಿಂತುಕೊಳ್ಳುತ್ತದೆಂದು ಹೇಳುತ್ತಾರೆ.

ಶ್ರೀ ಎಂ. ಮಲ್ಲಪ್ಪ.–ಸ್ಯಾನಿಟೋರಿಯಂಗೂ ಕೂಡ ೫೦೦ ಎ.ಎಂ.ಸಿ ಒಂದು ಎಕ್ಸ್‌ರೇ ಪ್ಲಾಂಟ್ ಮಂಜೂರಾಗಿದೆ, ಇನ್‌ಸ್ಟಾಲ್ ಆಗಬೇಕು ಅಷ್ಟೇ, ಇರತಕ್ಕ ಎಕ್ಸ್‌ರೇ ಕೆಲಸ ಮಾಡುತ್ತಿದೆ.

Difficult Financial Position of T.D.Bs.

420 SRI S.M.SHEERNALY CHANDRASEKHAR (Hosanagar) - Will the Minister for Rural Development and Panchayat Raj be pleased to state.-

(a) whether it has come to the notice of Government that many TDBs in the State cannot manage their affairs as they have no adequate sources of income or revenue;

(b) if so the remedies the Government have thought of, to overcome this difficulty?

SRI K.PRABHAKAR (Minister for Rural Development and Panchayat Raj) :

(a) Yes.

(b) Government is considering measurers to overcome the financial difficulties of TDBs.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.–ಹಾಲಿ ತಾಲ್ಲೂಕು ಬೋರ್ಡ್‌ಗಳನ್ನು ರಚನೆ ಮಾಡಿದ್ದೀರಲ್ಲ ಆ ತಾಲ್ಲೂಕು ಬೋರ್ಡ್‌ಗಳಿಗೆ ಒರತಕ್ಕ ಉತ್ಪನ್ನ ಏನು ದಾಖಲೆ ಆಧಾರದ ಮೇಲೆ ಸಿದ್ಧಾಂತಿ ಪಗಡದವರ ಸಂಬಳ–ಸಾರಿಗೆ, ಟಿ. ಎ. ಡಿ.ಎ.ಗೆ ಎಲ್ಲಿ ಏಷ್ಟು ವಿಚಾರಗಳಾಗುತ್ತವೆ ಮತ್ತು ಏಷ್ಟು ಉಳಿತಾಯವಾಗುತ್ತದೆ?

† ಶ್ರೀ ಕೆ. ಪ್ರಭಾಕರ್.– ಅದೆಲ್ಲ ಮೈನರ್ ಡೀಟೈಲ್ಸ್ ಆಯಿತು. ಈಗ ಇರುವ ಪರಮಾನ ಲ್ಯಾಂಡ್ ರೆವಿನ್ಯೂ, ಅದನ್ನು ೬೦:೪೦ ಪ್ರಮಾಣದಲ್ಲಿ ಹಂಚಿಕೊಡುತ್ತೇವೆ. ಕೆಲವು ತಾಲ್ಲೂಕು ಬೋರ್ಡ್‌ಗಳು ಸಂಬಳ ಕೊಡುವುದು ಕಷ್ಟವಾಗಿದೆ ಎಂದು ಸರ್ಕಾರಕ್ಕೆ ಬರೆಯುತ್ತಾರೆ. ಆಗಾಗ್ಗೆ ಅವುಗಳಿಗೆ ದುಡ್ಡು ತೊಂದರೆ ಇದೆ ಎಂಬುದನ್ನು ನೋಡಿ ನಿರ್ವಾಹಮಾಡುತ್ತೇವೆ. ಅವುಗಳು ಚೆನ್ನಾಗಿ ಕೆಲಸ ಮಾಡಬೇಕಾದರೆ ಅವುಗಳ ಸ್ಥಿತಿ ಉತ್ತಮ ಪಡಬೇಕು, ಆದ್ದರಿಂದ ಆ ಬಗ್ಗೆ ಏನು ಕಾರ್ಯಕ್ರಮ ರೂಪಿಸಿಕೊಳ್ಳಬೇಕೆನ್ನುವುದನ್ನು ಈಗ ತೀವ್ರವಾಗಿ ಯೋಚಿಸುತ್ತಿದ್ದೇವೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್. –ಈಗ ಹಾಲಿ ಏನಾಗಿದೆ ಎಂದರೆ, ೫ ಎಕರೆಗೆ ಒಳಪಟ್ಟು ಇರತಕ್ಕ ಜಮೀನಿಗೆ ಕಂದಾಯ ಇಲ್ಲವೆಂದು ಮಾಡಿದ್ದೀರಿ. ಜೊತೆಗೆ ಹೊಸನಗರ ತಾಲ್ಲೂಕಿನಲ್ಲಿ